**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

ಎಸ್ .ಸಿ. ನಂಃ **44/2021**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂಃ **01**
ಸಿ.ಡಬ್ಲ್ಯೂ ನಂಃ **06**
ಸಾಕ್ಷಿಯನ್ನು ದಿನಾಂಕಃ **10-03-2026**
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಬಸವರೆಡ್ಡಿ |
| ತಂದೆಯ ಹೆಸರು | ಃ | ಸಂಗಪ್ಪ |
| ವಯಸ್ಸು | ಃ | **50** ವರ್ಷ |
| ಉದ್ಯೋಗ | ಃ | ಕಾರ ಚಾಲಕ |
| ವಾಸ ಸ್ಥಳ | ಃ | ಕುಕನೂರು |

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ನಾನು **2019** ರಿಂದ **2022** ರವರೆಗೆ ಕುಕನೂರು ಪೊಲೀಸ ಠಾಣೆಯಲ್ಲಿ ಕಾರ ಚಾಲಕನಾಗಿ ಕೆಲಸ ಮಾಡಿದ್ದೇನೆ.

**2).** ದಿಃ **25-11-2020** ರಂದು ಚಾಸಾ **1** ರವರು ಮಾಳೇಕೊಪ್ಪಕ್ಕೆ ಹೋಗಬೇಕೆಂದು ರಾತ್ರಿ **8** ಗಂಟೆಗೆ ತಿಳಿಸಿದರು. ಅಷ್ಟರಲ್ಲಿ ಸಿಪಿಐ ನಾಗಿರೆಡ್ಡಿರವರು ಬಂದರು. **2** ಜೀಪಗಳಲ್ಲಿ ನಾವು ಸಿಬ್ಬಂದಿ ಇಟಗಿ ಮೂಲಕ ಮಾಳೇಕೊಪ್ಪಕ್ಕೆ ಹೋದೆವು. ಪಂಚನಾಮೆಗೆ ಕರೆತರುವಂತೆ ಚಾಸಾ **1** ರವರು ಮಾರುತಿಯವರಿಗೆ ಹೇಳಿದಾಗ ಅವರು ಇಬ್ಬರನ್ನು ಕರೆದುಕೊಂಡು ಬಂದರು. ರೋಡಲ್ಲಿ ಜೀಪ ನಿಲ್ಲಿಸಿ ಕಾಲ್ನಡಿಗೆಯಲ್ಲಿ **1** ನೇ ಆರೋಪಿ ಶಿವಪ್ಪ ಹರಿಣಶಿಕಾರಿ ರವರ ಮನೆಗೆ ಹೋದೆವು. ಆ ಮನೆಯ ಮೂಲೆಯಲ್ಲಿ ಗಂಧದ ಕಟ್ಟಿಗೆಗಳನ್ನು ಇಟ್ಟಿದ್ದರು. ಜಿಂಕೆ ಚರ್ಮ, ನಾಡಬಂದೂಕು, **2** ಬಲೆಗಳು, ಇಬ್ಬರು ಆರೋಪಿಗಳು ಓಡಿ ಹೋಗಿದ್ದರು. **3** ಜನ ಇದ್ದರು. ಸಾಹೇಬರು ಒಂದೊಂದೇ ನೋಡಿ ಬರೆದುಕೊಂಡರು. ಪಂಚನಾಮೆ ಮಾಡಿದರು.

**3).** ಗಂಧದ ಕಟ್ಟಿಗೆಗಳು, ಜಿಂಕೆ ಚರ್ಮ, ನಾಡಬಂದೂಕು, **2** ಬಲೆಗಳು ಇವುಗಳನ್ನು ತೆಗೆದುಕೊಂಡು ಜೀಪನಲ್ಲಿ ವಾಪಸ್ ಬಂದೆವು. ಆ ಸಮಯ **2** ಫೊಟೋಗಳನ್ನು ತೆಗೆಯಲಾಯಿತು. ಸದರಿ ಫೊಟೋಗಳನ್ನು ನಿಪಿ **1** ಮತ್ತು **2** ಎಂದು ಗುರುತಿಸಲಾಯಿತು. ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆ. ಸ್ವತ್ತು ಪಟ್ಟಿ ನಂಬರಃ **1/2020** ರಲ್ಲಿರುವ ಐಟಂ ನಂಬರ **1** ರಿಂದ

5 ಇವುಗಳನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅವುಗಳನ್ನು ಮುದ್ದೆಮಾಲು-1 ರಿಂದ 5 ಎಂದು ಗುರುತಿಸಲಾಯಿತು. ಶಿವಪ್ಪ, ಫಕೀರಪ್ಪ, ಶೇಖಪ್ಪ ಆರೋಪಿಗಳು ದಾಳಿ ಮಾಡಿದಾಗ ಇದ್ದರು. ಸದರಿ ಆರೋಪಿತರು ಈಗ ನ್ಯಾಯಾಲಯದಲ್ಲಿದ್ದಾರೆ.

ಪಾಟೀ ಸವಾಲು ಃ ಆರೋಪಿತರ ಪರ ವಕೀಲರಿಂದ

4). ಮಾಳೇಕೊಪ್ಪಕ್ಕೆ ಹೋಗಬೇಕೆಂದು ಚಾಸಾ 1 ತಿಳಿಸಿದಾಗ ನಾನು ಠಾಣೆಯಲ್ಲೆ ಇದ್ದೆ. ಯಲಬುರ್ಗಾ ಸಿಪಿಐ ರವರು 8 ಗಂಟೆಗೆ ಠಾಣೆಗೆ ಬಂದರು. ಅವರು ಬಂದ ಕೂಡಲೇ ನಾವೆಲ್ಲಾ ಒಟ್ಟಾಗಿ ದಾಳಿಗೆ ಹೋದೆವು. ಕುಕನೂರಿನಿಂದ ಮಾಳೇಕೊಪ್ಪ ಗ್ರಾಮ 13 ಕಿ ಮೀ ದೂರದಲ್ಲಿದೆ. ಮಾಳೆಕೊಪ್ಪ ತಲುಪಿದಾಗ 8-30 ಗಂಟೆಯಾಗಿತ್ತು. ಮಾಳೆಕೊಪ್ಪದಿಂದ ಸುಮಾರು ಅರ್ಧ ಕಿ ಮೀ ದೂರದಲ್ಲಿ ಜೀಪನ್ನು ನಿಲ್ಲಿಸಿದ್ದೆವು. ಅಕ್ಕಪಕ್ಕದಲ್ಲಿ ಜಮೀನುಗಳಿದ್ದವು ಆದರೆ ಅದರಲ್ಲಿ ಮನೆಗಳಿರಲಿಲ್ಲ. ನಾವು ಜೀಪ ಸಮೇತ 1ನೇ ಆರೋಪಿಯ ಮನೆಯ ಬಳಿ ಹೋಗಿದ್ದೆವು. ಸಾಮಾನ್ಯವಾಗಿ 8 ಗಂಟೆಯಾದ ನಂತರ ಎಲ್ಲರೂ ಊಟ ಮಾಡಿ ಮನೆಯಲ್ಲೆ ಇರುತ್ತಾರೆ ಎಂದರೆ ಸರಿ. ಸದರಿ ಮನೆ ಇರುವ ರಸ್ತೆಯಲ್ಲಿ ಆಯಾ ಮನೆಯವರು ಕುಳಿತಿದ್ದರು. ಮಾಳೇಕೊಪ್ಪ ರಸ್ತೆಯ ಬಲಭಾಗದಲ್ಲಿ 1ನೇ ಆರೋಪಿಯ ಮನೆ ಇದೆ.

5). 1ನೇ ಆರೋಪಿಯ ಮನೆಯ ಎದುರು ಸಾರ್ವಜನಿಕ ಲೈಟ ಕಂಬ ಇದ್ದು, ಬೆಳಕು ಇತ್ತು, ಆತನ ಮನೆಯೊಳಗೂ ಸಹಾ ಲೈಟ್ ಉರಿಯುತ್ತಿತ್ತು. ಆತನ ಮನೆಯ ಪಕ್ಕ ರಸ್ತೆಯಲ್ಲಿಯೇ ಜೀಪನ್ನು ನಿಲ್ಲಿಸಿದ್ದೆವು. ಆತನ ಮನೆಯ ಅಕ್ಕಪಕ್ಕದಲ್ಲಿ ಬೇರೆ ಮನೆಗಳು ಇರಲಿಲ್ಲ ಆದರೆ ಸ್ವಲ್ಪ ದೂರದಲ್ಲಿದ್ದವು. ಆತನ ಮನೆಯೊಳಗೆ ನಾವೆಲ್ಲಾ ಸೇರಿ ಒಟ್ಟಾಗಿ ಹೋದೆವು. ಪಂಚರು ಸಹಾ ಇದ್ದರು. ಅದು ಆಶ್ರಯ ಮನೆ ಆಗಿದ್ದು ಒಳಗೆ ಹೋಗಲು ಒಂದೇ ಬಾಗಿಲು ಇದೆ ಎಂದರೆ ಸರಿ. ನಾವು ಮನೆಯೊಳಗೆ ಹೋದ ನಂತರ ಅಕ್ಕಪಕ್ಕದ ಮನೆಯವರೂ ಸಹಾ ಬಂದಿದ್ದರು. ಸುಮಾರು 20-30 ಮಂದಿ ಸೇರಿದ್ದರು. ನಾವು 1ನೇ ಆರೋಪಿ ಮನೆಯೊಳಗೆ ಹೋಗುವ ಮೊದಲೇ ಇಬ್ಬರು ಓಡಿ ಹೋಗಿದ್ದರು.

6). ಮುದ್ದೆಮಾಲು-1 ರಿಂದ 5 ಮತ್ತು ನಾಡಾ ಬಂದೂಕು ಆ ಮನೆಯ ಪೂರ್ವ ದಿಕ್ಕಿನ ಮೂಲೆಯಲ್ಲಿದ್ದವು. ಓಡಿ ಹೋದ ಇಬ್ಬರನ್ನು ಹಿಡಿಯಲು

ಪ್ರಯತ್ನ ಮಾಡಲಾಯಿತು ಆದರೆ ಅವರು ಸಿಕ್ಕಿರಲಿಲ್ಲ. ನಾವು ಅರ್ಧ ಕಿ ಮೀ ಹಿಂದೆ ಜೀಪ ನಿಲ್ಲಿಸಿದಾಗ ಮಾರುತಿಯವರು ಇಬ್ಬರು ಪಂಚರನ್ನು ಕರೆದುಕೊಂಡು ಬಂದಿದ್ದರು. ಸದರಿ ಪಂಚರಿಗೆ ನೋಟೀಸುಗಳನ್ನು ಜಾರಿ ಮಾಡಿರಲಿಲ್ಲ. 1 ನೇ ಆರೋಪಿಯ ಮನೆಯೊಳಗೆ ಹೋದಾಗ 8-30 ಗಂಟೆಯಾಗಿತ್ತು. ಮುದ್ದೆಮಾಲುಗಳನ್ನು ಮತ್ತು ನಾಡಾಬಂದೂಕನ್ನು ಪಿಎಸ್ಐ ಮತ್ತು ಸಿಪಿಐ ಇಬ್ಬರು ನೋಡಿದರು. ಇಬ್ಬರು ಅಧಿಕಾರಿಗಳು 1 ನೇ ಆರೋಪಿಯನ್ನು ಸದರಿ ಮುದ್ದೆಮಾಲು ಮತ್ತು ನಾಡಾಬಂದೂಕಿನ ಬಗ್ಗೆ ವಿಚಾರ ಮಾಡಿದರು. ಆ ಸಮಯ ನಾನು ಮನೆಯೊಳಗೆ ಇದ್ದೆ.

7). ಗಂಧದ ತುಂಡುಗಳು ಮತ್ತು ಚಕ್ಕೆಗಳನ್ನು ಎಣಿಕೆ ಮಾಡಿರಲಿಲ್ಲ. ಚಾಸಾ 1 ನಾಡಾಬಂದೂಕನ್ನು ವಶಪಡಿಸಿಕೊಂಡರು. ಮನೆಯೊಳಗೆ ಕುಳಿತು ಪಂಚನಾಮೆ ದಾಖಲು ಮಾಡಿದ್ದರು. ಪಂಚರು ಮುದ್ದೆಮಾಲುಗಳ ಬಗ್ಗೆ ಮಾಹಿತಿಯನ್ನು ಎಎಸ್ಐ ರವರಿಗೆ ಕೊಟ್ಟರು. ಅಂಗಡಿಯಿಂದ ಕಾಟಾ ತೆಗೆದುಕೊಂಡು ಬಂದು ಗಂಧದ ತುಂಡುಗಳು ಮತ್ತು ಚಕ್ಕೆಗಳನ್ನು ತೂಕ ಮಾಡಿದಾಗ ಅವು 9 ಕೆ ಜಿ ಇರುವುದು ಗೊತ್ತಾಯಿತು. ರುದ್ರಪ್ಪ ಎಂಬುವರ ಅಂಗಡಿಯಿಂದ ಪಿಎಸ್ಐ ರವರೇ ಕಾಟಾ ತಂದಿದ್ದರು. ನಾನು ದಾಳಿಗೆ ಹೋಗಿರಲಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ಮುದ್ದೆಮಾಲುಗಳನ್ನು ಅಮಾನತ್ತುಪಡಿಸಿಕೊಂಡಿರಲಿಲ್ಲ ಎಂದರೆ ಸರಿಯಲ್ಲ.

8). ಓಡಿ ಹೋದ ಇಬ್ಬರು ವ್ಯಕ್ತಿಗಳು ಮಾಳೇಕೊಪ್ಪ ಗ್ರಾಮದವರಲ್ಲ ಎಂದರೆ ಸರಿಯಲ್ಲ. ನಿಪಿ 1 ಮತ್ತು 2 ಫೊಟೋಗಳಲ್ಲಿ ನಾನು ಕಾಣುವುದಿಲ್ಲ ಎಂದರೆ ಸರಿ. ನಾನು ಆ ಸ್ಥಳದಲ್ಲಿ ಹಾಜರಿಲ್ಲದೇ ಇದ್ದರೂ ಹಿರಿಯ ಅಧಿಕಾರಿಗಳ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ